# ಕಾಮದಹನವೆಂಬೋ ಜಾನಪದೀಯ ಜೀವನ–ಕಥನ ಅನುಸಂಧಾನ

**ಪ್ರೊ. ಚಂದ್ರಶೇಖರ್. ಎನ್.**
ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ
ಕೆ. ನಾರಾಯಣಪುರ, ಬೆಂಗಳೂರು–560077
chandrashekar.n@kristujayanti.com

ಇನ್ನೂ ಕಣ್ಣು ಬಿಡಾಕಿಲ್ಲ ಅಷ್ಟೊತ್ತಿಗೇನೇ ನಿಸರ್ಗವೇ ನಿದ್ದೆಯಿಂದೆದ್ದು ಕಣ್ಣುಜ್ಜಿ ಕುಳಿತಿತ್ತು. ಆ ಸೂರ್ಯ ಪರಮಾತ್ಮ ಆಗ ತಾನೆ ತಾಯಿ ಗರ್ಭದಾಗಿಂದ ಹೊರಗೆ ಬಂದು ತಪ್ಪೆಜ್ಜೆಗಳನ್ನಿಕ್ಕುತ್ತಾ (ಅಂಬೆಗಾಲು) ಆಕಾಶದಾಗೆ ನಡಿಗೆ ಕಲೀತಾ ಇರೋ ಹೊತ್ತಲ್ಲಿ ಊರ ದೇವಮೂಲೆಗಿರೋ ದಿನ್ನೆ ಮೇಲಿನ ಮನೆಯ ಸುತ್ತಣ ಬೇಲಿ–ಗೀಲಿ ದಾಟಿಕೊಂಡು ಜಗ್ಗನಕ–ಕುಣಿಕನಕ ಅಂಥಾ ಇನಿದಾದ ನಿನಾದವೊಂದು ನನ್ನ ಕಂಬಳೀನ ಸೀಳಿಕೊಂಡು ಬಂದು ಕಿವಿ ತಮಟೆಗೆ ಬಡೀತಿತ್ತು. ಅಷ್ಟೊತ್ತಿಗೆಲ್ಲಾ ಹೊತ್ತಿನೊಂದಿಗೆ ನನ್ನಜ್ಜಿ ಮುನಿಯಮ್ಮನ ಪಿತ್ತಾನೂ ನೆತ್ತೀಗೇರಿತ್ತು.

ಅಪ್ಪಯ್ಯಾ ಶಂದ್ರಾ.. (ಚಂದ್ರ) ಏಳಾ ಮ್ಯಾಲಿಕಾ.. ಇನ್ನೂ ಎಷ್ಟೊತ್ತು ಬಿದ್ದಕಂಡಿರೋದು ಹೊತ್ತು ಸಾಲದಾ.. ಅಂಥ ಕರೆಯೋದು ಕೈಲಾಸದಲ್ಲಿ ಶಿವನ ಭಜನೆ ನಡೆದಂತೆ ಭಾಸವಾಗುತ್ತಿತ್ತು. ಆಗಿನ್ನು ನನಗೆ 8–9 ವರ್ಷ, ಬೆಳೆಯೋ ವಯಸ್ಸಲ್ಲಾ ಅಂಗಾಗಿ ನಿದ್ದೆ ಜಾಸ್ತೀನೇ ಬರೋದು. ಈಗಾಗಲೇ ಮೋಟಮ್ಮನ ಮಗಳು ಸಾಕಮ್ಮ ಅಂದರೆ ನಮ್ಮಮ್ಮ ಮುಂಜಾನೆ 5–6 ಗಂಟೆಗೆಲ್ಲಾ ಎಚ್ಚರಾಗಿ ಮೂಖಜೀವಿಗಳನ್ನೆಲ್ಲಾ ಆಚೆ ಬಿಟ್ಟು, ಕಸಗುಡಿಸಿ, ಹಸುವಿನಲ್ಲಿ ಹಾಲುಕರೆದು ನಮ್ಮಪ್ಪನ ಕೈಲಿ ಡೇರಿಗೆ ಕಳಿಸಿರೋಳು. ಆ ವೇಳೆಗೆ ನನ್ನಜ್ಜಿ ಮುನೆಮ್ಮನು ಕಾಫಿ ಕುದಿಸುತ್ತಾ ಇದ್ದವಳು ನೊರೆಭರಿತ ತಾಜಾ ಹಾಲನ್ನು ಡಿಕಾಕ್ಷನ್‌ಗೆ ಸುರಿದು ಒಮ್ಮೆಲೆ ತಿರುವಿ ಲೋಟಕ್ಕೆ ಸುರಿದು ಸೊಸೆ ಸಾಕಮ್ಮನಿಗೆ ಕುಡಿಯೋಕೆ ಕೊಡುತಿದ್ದಳು. ಆ ವೇಳೆಗೆ ನಾನೂ ಹಾಸಿಗೆ ಬಿಟ್ಟು ಬಂದಾಗ ನಮ್ಮಮ್ಮ ಈವಾಗ ಎದ್ದೇನಪ್ಪಾ ಅನ್ನೋಳು. ನಮ್ಮಜ್ಜಿ ಮತ್ತು ನಮ್ಮಮ್ಮ ಯಾವತ್ತೂ ಅತ್ತೆ ಸೊಸೆ ತರ ಇದ್ದದ್ದು ನಾನು ನೋಡೇ ಇಲ್ಲ ಅಂತಹ ಅನ್ಯೋನ್ಯತೆ ಇತ್ತು ಅವರಲ್ಲಿ. ಬಹುಶಃ ಅಂದು ನಮ್ಮ್ ಮನೇಲಿ ಟಿ.ವಿ.ಇರಲಿಲ್ಲ ಜೊತೆಗೆ ಇವತ್ತಿನ ತರಹದ ಧಾರಾವಾಹಿಗಳೂ ಬಂದಿರಲಿಲ್ಲ ಅದಕ್ಕೇ ಇವರು ಅಷ್ಟು ಚೆನ್ನಾಗಿದ್ರು ಅನ್ನಿಸುತ್ತೆ, ಅದರಲ್ಲೂ ನನ್ನಜ್ಜಿ ಒಂದು ಕೈ ಮೇಲೇನೇ.

ಕಾಫಿ ಕುಡಿದ ಬಾಯಿ ಒಣಗೋದೇ ತಡ ನಡುವಲ್ಲಿ ಸಿಕ್ಕಿಸಿದ್ದ ಸಂಚಿಗೆ (ಚೀಲ)ಕೈ ಹಾಕಿ, ಎಲೆ ಅಡಿಕೆ ತೆಗೆದು ಬಾಯಿಗೆ ಇಟ್ಟಕಂಡು, ನಮ್ಮ್ ಹೆಂಚುಮನೆ ಮುಂದಿನ ವಪ್ಪಾರ (ವರಾಂಡ)ದ ಮೋಟು ಗೋಡೆಯಡಿ ಸಿಕ್ಕಿಸಿದ್ದ ವರವಾರೆ (ಹುಲ್ಲು ಹೆಕ್ಕುವ ಸಾಧನ)ಯನ್ನು ತಗಂಡು, ಗೋಡೆಯ ಪಕ್ಕದಲ್ಲಿದ್ದ ಸೈಜುಗಲ್ಲಿನ ಒಂದು ಕೊನೆಗೆ ವರವಾರೆ ಇಟ್ಟು ಸುತ್ತಿಗೆ ತಕ್ಕಂಡು ಅದರ ಕುತ್ತಿಗೆ ಮೇಲೆ, ಕೊನೆ ನಾಲಿಗೆ ಮೇಲೆ ಬಡೀತಾ ಅದರ ಮಂದಸ್ಥಿತಿಯನ್ನು ತೆಳು ಮಾಡಿ, ಕೈಯಾಗಿದ್ದ ಕಪ್ಪು ಕಚ್ಚಿನ ಬಳೆಗಳಿಗೆ ಎಂದೋ ಬೇರ್ಪಡಿಸಿದ್ದ ಹಳೆ ಸೀರೆಯ ಬಂಗಾರದ ಬಾರ್ಡರ್‌ನ ದಾರ ತಕ್ಕಂಡು ಬಳೆಯಿಂದ ಬಳೆಗೆ Interlock system ನಂತೆ ಗುತ್ತನವಾಗಿ ಕಟ್ಟಿ,

DOI: 10.59176

ಹುಲ್ಲಿನ ಚೀಲ ಮತ್ತು ಕುಡುಗೋಲನ್ನ ಎತ್ತಿಕೊಂಡು ಸಿದ್ದಮ್ಮ, ಚೌಡಮ್ಮ, ದ್ಯಾವಮ್ಮ, ರತ್ನಮ್ಮ ಮತ್ತೆ ಲಚ್ಚಮಮ್ಮನ್ನ ಕೂಗಿಕೊಂಡು ಊರಹೊರಗಿನ ಬಯಲಿಗೆ ಹುಲ್ಲು ತರಲಿಕ್ಕೆ ಹೊರಡೋ ವೇಳೆಗೆ ಇಡೀ ಊರೆಲ್ಲಾ ಒಂದು ಸುತ್ತು ಹೊಡಕಂಡು ಕೊನೇಗೆ ನಮ್ಮೋರ ಹಟ್ಟಿಕಡೆಗೆ  ಸುದ್ದಿ ಮುಟ್ಟಿಸೋಕೆ ಬರುತಿದ್ದ ನನ್ನ ಬರಹಗಳ ಸಾಂಸ್ಕೃತಿಕ ನಾಯಕ ಹಾಗೂ ತೋಟಿ ಚಾಕರಿ ಮಾಡುತ್ತಿದ್ದ ದೊಡ್ಡಪ್ಪ ಮುನಿಬ್ಯಾಟಪ್ಪನ ಬಾಯಲ್ಲಿ ಬರುತ್ತಿದ್ದ 'ಈವತ್ತು ಸಾಯಂಕಾಲ ಕಾಮಣ್ಣನ್ನ ಕೂರಿಸ್ತಾರಂತೆ ಮನೆಗೊಂದಾಳು ಊರು ಚಾವಡಿ ಹತ್ರಕ್ಕೆ ಬರಬೇಕಂತೆಪ್ಪೋ' ಜಗ್ಗನಕ–ಕುಣಿಕನಕ ಎಂಬ ಪಲುಕನ್ನು ಕೇಳೊಕೊಂಡು ಸಾಗುತಿರಲು ನಮ್ಮಮ್ಮ ಏನು ಮಾಮ ವತೀನೇನೆ (ಬೆಳಿಗ್ಗೆ) ಸಾಟುವ ಇಕ್ಕತಾ ಇದೀಯಾ ಎನ್ನಲು.. ಹೌದಮ್ಮಾ ನಡೆದುಕೊಂಡು ಬಂದಿರೋ ಪಬ್ತಿ ಬಿಡಕ್ಕಾತದಾ ಎಂದು ಹೇಳ್ತಿದ್ದ. ಬಹಳ ಸಂಭಾವಿತ ಹಾಗೂ ಸ್ವಾಭಿಮಾನಿ ನನ್ನ ದೊಡ್ಡಪ್ಪ. ಊರಾಗಿನ ಯಾವ್ದೇ ಸಾವು ನೋವು, ದೇವರ ಕಾರ್ಯ ಆದರೂನೂ ಈತ ಮುಂದೇ ನಿಂತಿರುತಿದ್ದ. ಊರಾಗಿನ ಯಜಮಾನಿಕೆ ಮಾಡ್ತಿದ್ದ ಜಮೀನ್ದಾರ್ರು, ಶಾನುಭೋಗರು, ಗೌಡರ ಗುಜರಿ ರಾಜಕೀಯವನ್ನು ತೀರಾ ಹತ್ತಿರದಿಂದ ಅರಿತವನು. ಎಲ್ಲೂ ಲಯ ತಪ್ಪದಂತೆ ಎಲ್ಲವನ್ನೂ ಬ್ಯಾಲೆನ್ಸ್ ಮಾಡ್ತಾ ಊರಿನ ಚಾಕರಿ ಮಾಡುತ್ತಿದ್ದನು. ಆತನ ಮಾತಿಂದಲೇ ಕೇಳಿರೋದು ನಾನು, ಏನಂದ್ರೆ ಅಂದಿನ ಸ್ವಾತಂತ್ರ್ಯಪೂರ್ವದ ಕಾಲದಲ್ಲಿ ಮೈಸೂರಿನ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಥಾಪಿಸಿದ ಪ್ರಜಾಪ್ರತಿನಿಧಿ ಸಭೆಯ ಅನುಸಾರ ಪಟೇಲ, ಶಾನುಭೋಗ ಮತ್ತು ತೋಟಿ ಗ್ರಾಮದ ಸಮಗ್ರ ಅಭಿವೃದ್ಧಿ ಮತ್ತು ಕಾರ್ಯಯೋಜನೆಗಳ ರೂವಾರಿಗಳಾಗಿ ಕೆಲಸ ಮಾಡುತ್ತಿದ್ದರು.

ಬಾಲ್ಯದಿಂದಲೂ ನಮಗೆ ಊರಲ್ಲಿ ಮನರಂಜನೆಗೆ ಯಾವುದೇ ಕೊರತೆಯಿರಲಿಲ್ಲ. 1ರಿಂದ 7ನೇ ತರಗತಿಯವರೆಗೆ ಊರ ಸರ್ಕಾರಿ ಶಾಲೆಯಲ್ಲೇ ವ್ಯಾಸಂಗ ಮಾಡಿದ ನನಗೆ ಮತ್ತು ನನ್ನ ಸಹಪಾಠಿಗಳಿಗೆ ಊರಿನ ಹಬ್ಬ–ಹರಿದಿನಗಳಲ್ಲಿ ಎಲ್ಲಿಲ್ಲದ ಸಂಭ್ರಮ. ಕಬಡ್ಡಿ ಪಂದ್ಯಾವಳಿಗಳು, ಸುಗ್ಗಿ ಮುಗಿದ ನಂತರ ಆಂದ್ರದಿಂದ ಬರುತ್ತಿದ್ದ ರೆಕಾರ್ಡ್ ಡ್ಯಾನ್ಸ್‌ನವರು, ಗಂಗೆತ್ತುಗಳ ಕುಣಿಸೋರು, ತೊಗಲು ಬೊಂಬೆ ಆಟದವರು, ಪಂಡರಾಪುರ ಭಜನೆಯವರು, ಚೌಡೇಶ್ವರಿದೇವಿಗೆ ನಮ್ಮೂರ ತೊಗಟವೀರ ನೇಕಾರ ಸಮುದಾಯದವರು ಮಾಡುತ್ತಿದ್ದ ಬಲಿಹಾರ ಪೂಜೆ, ನೆರೆಯ ಭಕ್ತರಹಳ್ಳಿಯ ಬಸವರಾಜಯ್ಯನ ವೀರಗಾಸೆ ಕುಣಿತ ಇತ್ಯಾದಿ.. ಅದರಲ್ಲಿ ವಿಶೇಷವೆಂದರೆ ಕಾಮನ ಹಬ್ಬ. ಬೆಂಗಳೂರು ಗ್ರಾಮಾಂತರ ಜಿಲ್ಲೆಯೊಂದಿಗೆ ಗಡಿ ಹಂಚಿಕೊಂಡಿದ್ದರೂ ಶಿಡ್ಲಘಟ್ಟ ತಾಲ್ಲೂಕಿಗೆ ಸೇರಿದ ಸುಮಾರು 150 ಕುಟುಂಬಗಳು ವಾಸಿಸುತ್ತಿದ್ದ ಕುಗ್ರಾಮ ನನ್ನದು. ರೈತಾಪಿ ಮತ್ತು ಕೂಲಿಕಾರರೇ ಹೆಚ್ಚಾಗಿರುವ ಊರಲ್ಲಿ ಕಾಲಕಾಲಕ್ಕೆ ಮಳೆ–ಬೆಳೆ ಆಗಿ ಊರು ಸುಭೀಕ್ಷವಾಗಿ ಇರಲಿ ಎನ್ನುವ ಕಾರಣಕ್ಕೆ ದೇವರ ಕೆಲಸಗಳನ್ನು ಬಹಳ ನೇಮ–ನಿಷ್ಟೆಯಿಂದ ಗ್ರಾಮಸ್ತರೆಲ್ಲಾ ಸೇರಿ ಆಚರಿಸಿಕೊಂಡು ಬಂದಿರೋದು ಉಂಟು. ನಮ್ಮೂರ ನಡುಬೀದಿಯ ಚಾವಡಿಯಲ್ಲಿ ಕಾಮನ ಪ್ರತಿಮೆಯನ್ನು ಇರಿಸಿ ಪ್ರತಿ ಹುಣ್ಣಿಮೆಗೆ ಅದರ ಪೂಜೆ ಸಲ್ಲಿಸುವ ಕಾಯಕವನ್ನ ಒಕ್ಕಲಿಗರ ಸಿದ್ದಣ್ಣನ ಮಗ ನಾರಾಯಣಸ್ವಾಮಿ ಅಲಿಯಾಸ್ ದೊಡ್ಡಪ್ಪಿ ಮಾಡ್ತಿದ್ದ. ಹುಣ್ಣಿಮೆಗೆ ಮುಂಚೆ ಸುಮಾರು ಹತ್ತು ದಿನಗಳ ಕಾಲ ಪ್ರತಿಷ್ಠಾಪಿಸಿ ಹನ್ನೊಂದನೆಯ ದಿನ ಅಂದರೆ ಆ ಹೋಳಿಯದಿನ ಕಾಮನನ್ನು ದಹಿಸುವ ವಾಡಿಕೆಯಿತ್ತು. ಪ್ರತಿದಿನ ಸಂಜೆ ಹದ್ದು–ಕಾಗೆ ಗೂಡಿಗೋಗೋ ವೇಳೆಗೆ ಚಾವಡಿ ಹತ್ರ ನನ್ನ ದೊಡ್ಡಪ್ಪನ ಒಂಟಿ ತಮಟೆ ಶಬ್ದ ಎತ್ತರದಲ್ಲಿರೋ ನಮ್ಮ ಮನೆಗೆ ಬಹಳಾ ಚೆನ್ನಾಗಿ ಕೇಳೋದು ಆ ಮರುಕ್ಷಣವೇ ನಾವು ತಂಡವಾಗಿ ಚಾವಡಿ ಬಳಿ ಹಾಜರ್.

ಈಗಿನಂತೆ ಪ್ಲಾಸ್ಟಿಕ್ ವಾದ್ಯವಲ್ಲ ಆ ತಮಟೆ, ಅದರ ತಯಾರಿಯ ಹಿಂದೆ ಒಂದು ರೋಚಕ ಕಥೆಯಿದೆ. ಹೇಳಿ ಕೇಳಿ ನನ್ನ ದೊಡ್ಡಪ್ಪ ಸೃಜನಶೀಲ ಹಾಗೂ ಕಲಾ ನಿಪುಣ, ತಮಟೆ ತಯಾರಿಕೆ ಕಲೆಯನ್ನು ಚೆನ್ನಾಗಿ ಅರಿತಿದ್ದವ. ಸೂಕ್ತವಾದ ಮೇಕೆ ಚರ್ಮವನ್ನ ತಂದು ಅದನ್ನ ನೆಲದ ಮೇಲೆ ಹಾಸಿ ಅದರ ಅಷ್ಟ ದಿಕ್ಕುಗಳಿಗೂ ಮರದ ಘಟ್ಟಾಗಳನ್ನು ಹೊಡೆದು ಬಿಸಿಲಿಗೆ ಒಣಗಲು ಬಿಟ್ಟು, ಆ ಚರ್ಮ ತೇವಾಂಶ ಕಳಕಂಡು ಗಡುಸಾಗುವ ಸಂದರ್ಭಕ್ಕೆ ಅದರ ಮೆಲೆ ರಾಗಿ ಹುಲ್ಲಿನ ಪದರ ಹಾಸಿ, ಅದಕ್ಕೆ ತೆಳುವಾಗಿ ಬೆಂಕಿ ತೋರಿಸಿ ಚರ್ಮದ ಮೇಲಿರುವ ರೋಮವೆಲ್ಲಾ ಕಳೆದು ಬೂದಿಮಾತ್ರ ಉಳಿದಿರುವಾಗ ಅದರಿಂದಲೇ ಚರ್ಮವನ್ನು ನುಣುಪಾಗುವಂತೆ ತಿಕ್ಕಿ ಅದರ ಮೇಲೆ ವೃತಾಕಾರದ ಕಬ್ಬಿಣದ ಪಟ್ಟಿಯನ್ನಿಟ್ಟು ಅದರಳತೆಗೆ ತಕ್ಕಂತೆ ಕತ್ತರಿಸಿ, ಚರ್ಮದಿಂದಲೇ ಮಾಡಿ ಕುಣಿಹಾಕಿದ ದಾರವನ್ನು ಸುರುಳಿಯಾಕಾರದಲ್ಲಿ ಸುತ್ತಿ ಕಬ್ಬಿಣದ ಪಟ್ಟಿಗೆ ಬಿಗಿಯಾಗಿ ಬಿಗಿದು, ದನಿ ಮಾರ್ದನಿಸುವಂತೆ ತಮಟೆಯನ್ನು ತಯಾರಿಸುತ್ತಿದ್ದರು. ಇನ್ನು ತಮಟೆ ವಾದನಕ್ಕೆ ಬೇಕಿದ್ದ ಕಾರೆ ಗಿಡದ ಕೋಲು ಮತ್ತು ಬಿದಿರಿನ ನುಣುಪಾದ ಪುಳ್ಳೆ ಸರಿಮಾಡಿಕೊಂಡು ಅಖಾಡಕ್ಕೆ ಇಳಿದ್ರೆ ತನಗೆ ತಾನೇ ಸಾಟಿ ಅನ್ನಂಗಿತ್ತು. ಪುಳ್ಳೆ ತಮಟೆಯ ಮೈ ಸೋಕುತಿದ್ದಂತೆ ಮುಕ್ಕೋಟಿ ದೇವತೆಗಳೂ ಧರೆಗಿಳೀತಿದ್ದವು. ಇನ್ನೂ ಉಳಿದಿರೋ ಬೀದಿಗಳಿಗೆ ಸುದ್ದಿ ಮುಟ್ಟಿಸುವ ಸಲುವಾಗಿ ನಡೀತಿರಬೇಕಾದರೆ ತಮಟೆ ಸದ್ದು ಕೊಂಚ ಮೆತ್ತಗಾಗೋದು ಆಗ ಮಾರ್ಗಮಧ್ಯೆ ಒಂದಿಡಿ ಸೌದೆ ಹಾಕಿ ಕಡ್ಡಿಗೀರಿ ಬೆಂಕಿಶಾಖಕ್ಕೆ ತಮಟೆ ಚರ್ಮದ ಮೈನ ಬೆಚ್ಚಗೆ ಮಾಡ್ತಾ ಒಂದೊಂದೇ ಏಟು ಹಾಕ್ತಾ ಕಣ್ ಕಣ್ ಅನ್ನೋ ನಾದವನ್ನ ಚೆಕ್ ಮಾಡ್ಕಂಡು ಮುಂದುವರಿಯೋನು, ಆತನಿಗೆ ನೆರವಾಗಿ ಊರ ಸಣ್ಣ ಹುಡುಗರು ಬೀದಿ–ಬೀದಿಗಳಲ್ಲಿ ಆತನನ್ನ Escort ಮಾಡೋರು. ಆ ಹತ್ತು ದಿನಗಳಲ್ಲಿ ಈ ಯಾನ ನಿರಂತರವಾಗಿ ಸಾಗಿ ಪ್ರತಿದಿನದ ಸಂಜೆ ಪೂಜೆಯನ್ನು ಅಚ್ಚುಕಟ್ಟಾಗಿ ಮಾಡುತಿದ್ದ ದೊಡ್ಡಪ್ಪಿ, ಆತನಿಗೆ ಸಾಥ್ ನೀಡುತ್ತಿದ್ದ ಚಾವಡಿ ಮುಂದಿನ ಮನೆಯ ಚಿಕ್ಕನಾಗಪ್ಪ ಪೂಜೆ ನಂತರ ಹಂಚುತಿದ್ದ ಕಡಲೇಪೂರಿ, ಸಕ್ಕರೆ ಕಡಲೇಪಪ್ಪು, ಸಿಹಿಅವಲಕ್ಕಿ ನಮ್ಮ ಖುಷಿನಾ ಡಬಲ್ ಮಾಡ್ತಿದ್ವು.

**ಕಾಮನ ಹಬ್ಬದ ಪೌರಾಣಿಕ ಹಿನ್ನೆಲೆ:–**

ವರ್ಷದ ಕೊನೆಯ ಫಾಲ್ಗುಣ ಮಾಸದಲ್ಲಿ ಬರುವ ಈ ಹಬ್ಬ ವಸಂತನ ಆಗಮನದ ಸಂಕೇತ ಎನ್ನುತ್ತಾರೆ. ಅದಕ್ಕೆ ಇದನ್ನು ಹೋಳಿ, ಹೋಲಿ, ವಸಂತೋತ್ಸವ, ಕಾಮದಹನ ಎಂಬ ಹೆಸರುಗಳಲ್ಲಿ ಆಚರಿಸುತ್ತಾರೆ. ಈ ಹಬ್ಬದ ಬಗ್ಗೆ ಜನಪದರಲ್ಲಿ ಹಲವಾರು ಜಿಜ್ಞಾಸೆಗಳಿದ್ದರೂ ಡಾ.ಗದ್ದಗಿಮಠ ಅವರು ಹೇಳುವಂತೆ ಭಾರತೀಯ ಹಬ್ಬಗಳೆಲ್ಲಾ ಹೆಣ್ಣುಮಕ್ಕಳ ಹಬ್ಬಗಳಾಗಿದ್ದು ಶ್ರಮಿಕ ಗಂಡಸರು ದೇವರಲ್ಲಿ ಮೊರೆಯಿಟ್ಟು ನಮಗೂ ಒಂದು ಹಬ್ಬ ಬೇಕೆಂದು ಕೇಳಿದರಂತೆ, ಆಗ ದೇವರು ಹೋಳಿ ಹಬ್ಬ ಆಚರಿಸಲು ಹೇಳಿದನಂತೆ ಎಂಬ ಉಲ್ಲೇಖವಿದೆ. ತಾರಕಾಸುರನ ಸಂಹಾರಕ್ಕಾಗಿ ಹವಣಿಸುತ್ತಿದ್ದ ಋಷಿಮುನಿಗಳು ಶಿವನಿಂದ ಹುಟ್ಟಿದವನಿಂದ ಮಾತ್ರ ಇವನ ಸಾಧ್ಯವೆಂದು ತಿಳಿದು ಘೋರ ತಪಸ್ವಿಯಾದ ಶಿವನ ತಪೋಭಂಗ ಮಾಡಲು ಕಾಮ/ಮನ್ಮಥನಿಂದ ಮಾತ್ರ ಸಾಧ್ಯವೆಂದು ಅರಿತು, ಗಿರಿಜೆಯ ಬಗ್ಗೆ ಶಿವನಲ್ಲಿ ಅನುರಾಗೋತ್ಪತ್ತಿಯಾಗುವಂತೆ ಮಾಡಲು ಹೂಬಾಣವನ್ನು ಪ್ರಯೋಗಿಸುವಂತೆ ಮಾಡಿ ಶಿವನ ಕೆಂಗಣ್ಣಿಗೆ ಗುರಿಯಾಗಿ ಹಣೆಗಣ್ಣನ್ನು ತೆರೆದಾಗ ಅವನ ಎರಡೂ ಕಣ್ಣುಗಳಲ್ಲಿ ಗಿರಿಜೆಯ ಸೌಂದರ್ಯ ಕಂಡು ವಿಚಲಿತನಾಗಿ ಇದಕ್ಕೆ ಕಾಮನೇ ಕಾರಣವೆಂದು ತಿಳಿದು ಉರಿಗಣ್ಣಿನಿಂದ ಸುಡಲ್ಪಡುವ ಕತೆ ಕೇಳಿದ್ದೇವೆ. ಇನ್ನೊಂದೆಡೆ ಸತಿಪತಿಗಳ ಗೊಡವೆಯಲ್ಲಿ ಕಾಮ ಬಲಿಯಾದರೆ ರತಿಯ

DOI: 10.59176
http://www.kristujayantijournal.com/index.php/KJKSP

ಗತಿಯೇನೆಂದು ಪಾರ್ವತಿ ಚಿಂತಿಸಲು ಅವನು ಅನಂಗನಾಗಿ ಸದಾ ನಿನ್ನ ಜೊತೆಗಿರುತ್ತಾನೆ ಎಂದು ಶಿವ ವರಕೊಟ್ಟನಂತೆ ಅಂತೆಯೇ ಅವನು ಸಕಲ ಜೀವಾತ್ಮರಲ್ಲಿ ಸದಾ ಬದುಕಿದ್ದಾನೆ ಎಂಬುದು ಪುರಾಣೋಕ್ತ ಕಥೆ.

ಪ್ರತಿ ನರನಲ್ಲಿ ಮನೆಮಾಡಿರುವ ಈ ಮೋಹ ಎಲ್ಲೆ ಮೀರಿ ಅನಾಹುತಗಳು ಸಂಭವಿಸುತ್ತವೆ. ಅದನ್ನು ಹತೋಟಿಯಲ್ಲಿಡಬೇಕಾದರೆ ಒಂದು ಎಚ್ಚರ ಬೇಕಾಗುತ್ತದೆ, ಅದರ ಸಂಕೇತವಾಗಿ ಈ ಪ್ರಾತಿನಿಧಿಕ ಆಚರಣೆಯನ್ನು ಇಡೀ ದೇಶವ್ಯಾಪಿ ಭಿನ್ನವಾಗಿ ಆಚರಿಸಲಾಗುತ್ತಿದೆ. ನನ್ನೂರಿನಲ್ಲೂ ಈ ಆಚರಣೆಗೆ ಮೂರು ತಲೆಮಾರುಗಳ ಅಂದರೆ ದ್ಯಾವಣ್ಣ–ಸಿದ್ದಪ್ಪ–ನಾರಾಯಣಸ್ವಾಮಿ(ದೊಡ್ಡಪ್ಪ) ಹೀಗೆ ಸುದೀರ್ಘ ಇತಿಹಾಸವಿದೆ. ಪ್ರತಿದಿನ ಪೂಜೆ ಆದಮೇಲೆ ಚಾವಡಿ ಬೀಗ ನನ್ನ ದೊಡ್ಡಪ್ಪನ ಚಡ್ಡಿಯ ಕಿಸೆಗಿಳಿಯೋದು. ಹತ್ತು ದಿನದ Routine ಆದಮೇಲೆ ಎಲ್ಲರೂ ಹೋಳಿ ಹುಣ್ಣಿಮೆಯ ಅಂತಿಮ ದಿನಕ್ಕೆ ಚಾತಕ ಪಕ್ಷಿಗಳಂತೆ ಕಾಯ್ತಿದ್ವಿ ಕಾರಣ ಅದು ನಮ್ಮ ಬಾಲ್ಯದ ಸಂಕ್ರಮಣಕಾಲ, ದಿನಗಳು ಮಳೆಹನಿಗಳಂತೆ ಉದುರಿಹೋಗ್ತಿದ್ದು ಕಾಮದಹನಕ್ಕೆ ಚಾವಡಿ ಅಣಿಯಾಗುತ್ತಿತ್ತು, ಯಥಾರೀತಿ ನನ್ನ ದೊಡ್ಡಪ್ಪ ಊರೆಲ್ಲಾ ಸುತ್ತಿ ಸಾಯಂಕಾಲದ ಪೂಜೆಯ ಬಗ್ಗೆ ಸಾರಿ ಬರ್‍ತಿದ್ದ.

**ಚಾವಡಿಯ ಇತಿಹಾಸ :–** ನಮ್ಮೂರ ನಡು ಬೀದಿಯ ಈ ಚಾವಡಿಗೆ ಪೂರ್ವ ಇತಿಹಾಸವಿದೆ. ಸ್ವಾತಂತ್ರ್ಯಪೂರ್ವದಿಂದಲೂ ವಿದ್ಯಾಕೇಂದ್ರವಾಗಿದ್ದು ನನ್ನಪ್ಪನ ವಿದ್ಯಾಭ್ಯಾಸವೂ ಇಲ್ಲೇ ಆಗಿದ್ದು, ಬಿಡುವಿನ ಸಮಯದಲ್ಲಿ ಊರ ನ್ಯಾಯ ಪಂಚಾಯ್ತಿ ಇದರಲ್ಲೇ ನಡೀತಿತ್ತಂತೆ. ನಂತರ ನಾವು ಶಾಲೆ ಆರಂಭಿಸಿದ್ದೂ ಇಲ್ಲಿಂದಲೇ, ಶಾಲೆ ಎಂದರೆ ದೇವಾಲಯ ಅನ್ನೋ ಮಾತಿನ ಅನ್ವರ್ಥರೂಪದಂತಿತ್ತು ಚಾವಡಿ. ಹೊತ್ತುಮೂಡುವ ಕಡೆಯ ಬಾಗಿಲಿನ ಈ ಕಟ್ಟಡದಲ್ಲಿ ಬೃಹತ್‌ಗಾತ್ರದ ಗಣೇಶ, ವೀಣಾಪಾಣಿ ಸರಸ್ವತಿ, ಕಮಲದಲ್ಲಿ ಕುಳಿತಿರುವ ಲಕ್ಷ್ಮಿ ಹಾಗೂ ಸೀತಾರಾಮರ ಪರಿವಾರವಿರುವ ಫೋಟೋಗಳು ನಮ್ಮ ಓದಿನಲ್ಲಿ ಭಕ್ತಿಯನ್ನು ಮೂಡಿಸುತ್ತಿದ್ದವು. ಈ ಒಂಟಿ ಕೊಠಡಿಯು ಅಂದಿನ ಕಾಲದ 'ಸಾಕ್ಷರತೆನೆ' ಎಂಬ ವಯಸ್ಕಶಿಕ್ಷಣ ಕಾರ್ಯಕ್ರಮದ ಕಲಿಕಾ ಕೇಂದ್ರವೂ ಆಗಿದ್ದು ನಮ್ಮಮ್ಮನಂಥ ಅದೆಷ್ಟೋ ತಾಯಂದಿರು ಸಹಿ ಮಾಡೋದು ಕಲಿತದ್ದು ಇಲ್ಲೇನೇ. ಮುಂದುವರೆದು ಇದು ಸಮುದಾಯದ ಗ್ರಂಥಾಲಯವೂ ಆಗಿ ಮಾರ್ಪಾಡಾಯಿತು, ಹೀಗೆ ಒಂದು ರೀತಿಯಲ್ಲಿ ವಿವಿಧೋದ್ದೇಶ ಯೋಜನೆಗಳ ಆವಾಸ ಸ್ಥಾನವಾಗಿತ್ತು. ಈ ಕೋಣೆಯ ವಾಯುವ್ಯ ದಿಕ್ಕಿನಲಿ ಗೋಡೆಗೆ ಎತ್ತರದಲ್ಲಿ ಹಾಕಿದ್ದ ಮರದ ಕಪಾಟಿನ ಮೇಲೆ ಮೂರ್ತಿಯೊಂದನ್ನು ಕೂರಿಸಿ ಹಸಿರು ಹೊದಿಕೆಯಿಂದ ಮುಚ್ಚಲಾಗಿದ್ದು, ಸದಾ ನಮ್ಮ ಭಯ ಮತ್ತು ಕುತೂಹಲಕ್ಕೆ ಆಹಾರವಾಗಿತ್ತು. ಆದರೆ ಅದನ್ನು ನೋಡುವ ಅವಕಾಶವಿದ್ದದ್ದು ವರ್ಷಕ್ಕೊಮ್ಮೆ ಅದು ಕೆಳಗಿಳಿದ ಆ ಹತ್ತುದಿನ ಮಾತ್ರ. ಇನ್ನೂ ಮರೆಯಲಾಗದ ನೆನಪೆಂದರೆ ಪ್ರತಿ ರಾಷ್ಟ್ರೀಯಹಬ್ಬಗಳಾದ ಗಣರಾಜ್ಯದಿನ, ಸ್ವಾತಂತ್ರ್ಯದಿನ, ಕನ್ನಡ ರಾಜ್ಯೋತ್ಸವ, ಮಕ್ಕಳದಿನ, ಗಾಂಧಿ ಮತ್ತು ಅಂಬೇಡ್ಕರ್ ಜಯಂತಿಗಳ ಸಂದರ್ಭದಲ್ಲಿ ನಮ್ಮ ಸಹಪಾಠಿಗಳ ತಂಡ ಅವರ ಮನೆಯ ಹಿತ್ತಲ ಗಿಡಗಳ ಸಂಪಿಗೆ, ಸ್ಫಟಿಕ, ಚೆಂಡು ಹೂ ಅಲ್ಲದೆ ಊರಿನ ತೋಟಗಳ ಬಳಿ ಸಿಗುವ ಜಾತ್ಯತೀತ ಪುಷ್ಪಗಳನ್ನು ತಂದು ಪೂಜೆಗೆ ಇಡುತ್ತಿದ್ದೆವು. ಅದರಲ್ಲೂ ವಿಶೇಷವಾಗಿ ನಾಗಮಂಗಲದ ರಸ್ತೆಯ ಬಳಿಯ ಚಿಕ್ಕಪೂವಣ್ಣನವರ ತೋಟದ ಬದುವಿನಲ್ಲಿದ್ದ ಕೆಂಪು ದಾಸವಾಳ ಮತ್ತು ರಂಗಣ್ಣನವರ ಮಠದ ಬಳಿಯಿದ್ದ ಗೆನ್ನೇರೆ(ಕಣಗಿಲೆ)ಹೂವಿನ ಕ್ಲಸ್ಟರ್ ಅನ್ನು ಮರೆಯಲು ಸಾಧ್ಯವಿಲ್ಲ, ಕಾರಣ ಚಾವಡಿಯ ಪೂಜೆಗೆ ಇವು ಬಹುಕಾಲ ನಮಗೆ ಹೂವನಿತ್ತು ಸಲಹಿದ ಜಾಗಗಳು.

ನಮ್ಮೆಲ್ಲರ ಬಹು ನಿರೀಕ್ಷೆಯ ಸಮಯ ಬಂದಿತ್ತು, ಆ ದಿನದ ಗೋದೂಳಿ ಸಮಯಕ್ಕೆ ಜೀವಜಗತ್ತು ಗೂಡುಸೇರುವ ಹೊತ್ತಿಗೆ ಜನರೆಲ್ಲ ಚಾವಡಿ ಮುಂದೆ ಹಾಜರಾಗಿದ್ದಾರೆ. ಶಾಲಾದಿನಗಳ ಹೊರತಾಗಿ ಇಂತಹ

ದೇವತಾ ಕಾರ್ಯಗಳಲ್ಲಿ ನಮಗೆ ರಾತ್ರಿ ವೇಳೆಯೂ ಶಾಲಾ ಪ್ರವೇಶದ ಅವಕಾಶವಿತ್ತು. ಇಲ್ಲಿ ಯಾವುದೇ ತಾರತಮ್ಯವಿಲ್ಲದೆ ಸಕಲರೂ ಸೇರುವ ಪದ್ಧತಿ ಇಂದಿಗೂ ಜೀವಂತ. ಆ ದಿನದ ಬೆಳಗಿನಿಂದಲೇ ಕಾಮನ ಪೂಜಾರಿ ದೊಡ್ಡಪ್ಪಿ ಸೀರೆಯುಟ್ಟು ಥೇಟ್ ಹೆಣ್ಣಿನ ವೇಷ ಧರಿಸಿ ಮುತ್ತೈದೆಯಂತೆ ಅರಿಶಿನ, ಕುಂಕುಮ, ಹೂ ಧರಿಸಿ ಕೈಯಲ್ಲೊಂದು ಮೊಂಡು ಪೊರಕೆಯನ್ನಿಡಿದು ಊರಿನ ಬೀದಿ ಬೀದಿಗಳಲ್ಲಿ ಸಂಚರಿಸುತ್ತಿದ್ದನು ಆತನ ಹಿಂದೆ ಮುಂದೆ ಹುಡುಗರ ದಂಡು. ಒಮ್ಮೊಮ್ಮೆ ತಾನು ಗದರಿಸಿದಾಗ ಹುಡುಗರೆಲ್ಲಾ ದಿಕ್ಕಾಪಾಲಾಗಿ ಚದುರಿ ಮತ್ತೆ ನೀರಿನಂತೆ ಹರಿದು ಅಲ್ಲಿಗೇ ಸೇರುತ್ತಿದ್ದೆವು. ತಾನು ಮಾತ್ರ ನಿರ್ಲಜ್ಜೆಯಿಂದ ಶ್ರದ್ಧಾಪೂರ್ವಕವಾಗಿ ಸಾಗುತ್ತಿದ್ದನು. ಕೆಲ ಪಡ್ಡೆ ಹುಡುಗರು ಮತ್ತು ಚಪಲಚನ್ನಿಗರು (Play boys) ಈ ವೇಷದಾರಿಯ ಸೆರಗಿಗೆ ಕೈ ಹಾಕುವ, ಸುಳ್ಳೆದೆಗಳನ್ನು ಮುಟ್ಟುವ ಚೇಷ್ಟೆಮಾಡುವರು. ಅಂಥವರನ್ನು ಹುಡುಕಿ ಬೆನ್ನಟ್ಟಿ ಹೋಗಿ ನೆಲಕ್ಕೆ ಕೆಡವಿ ತಲೆ, ಬೆನ್ನು, ಪಿರ್ರೆಗಳಿಗೆ ಬಾರಿಸಿ ಮೊಂಡುಪೊರಕೆ ಸೇವೆ ಮಾಡುತ್ತಿದ್ದನು. ಕಾಲಾ ನಂತರ ನಾನೂ ಇದರ ಫಲಾನುಭವಿಯಾಗಿದ್ದೆ ಆದರೆ ಇದು ಕೇವಲ ಮನರಂಜನಾತ್ಮಕವಾದದ್ದೇ ವಿನಃ ಯಾರೂ ಮುಖ ಸಿಂಡರಿಸಿಕೊಳ್ಳುತ್ತಿರಲಿಲ್ಲ, ಮಹಿಳೆಯರು ಮಾತ್ರ ಈ ಸೇವೆಯಿಂದ ಹೊರಕ್ಕೆ. ಇಂದಿಗೂ ತನ್ನ ಎಪ್ಪತ್ತರ ಸನಿಹದಲ್ಲೂ ಯಾವುದೇ ಫಲಾಪೇಕ್ಷೆಯಿಲ್ಲದ ಈ ಸೇವೆಯನ್ನು ಮುನ್ನೆಡಿಸಿಕೊಂಡು ಬಂದಿರುವ ದೊಡ್ಡಪ್ಪಿಯೊಂದಿಗಿನ ನನ್ನ ನಂಟು ಇಂದಿಗೂ ಗಾಢವಾದದ್ದು.

ಚಾವಡಿಯೊಳಗಿನ ಫೋಟೋಗಳಿಗೆ ನೆರೆಮನೆಯ ಪೂಜಾರಿ ವೆಂಕಟಪ್ಪ ಪೂಜೆ ಸಲ್ಲಿಸುತ್ತಿದ್ದನು, ವಯಸ್ಸಿನ ಅಂತರವಿಲ್ಲದೆ ಜನಜಂಗುಳಿ ಸೇರುತ್ತಿತ್ತು. ನಂತರ ದೊಡ್ಡಪ್ಪಿ ಕೈಯ್ಯಲ್ಲಿ ಕಬ್ಬಿನ ಜಲ್ಲೆ ಹಿಡಿದು ಪೀಠಧಾರಿಯಾದ ಕಾಮನ ಮೂರ್ತಿಗೆ ಪೂಜೆ ಸಲ್ಲಿಸಿ ಆರತಿ ಬೆಳಗಿದ ನಂತರ ನಿಜವಾದ ಹಬ್ಬ ಶುರುವಾಗುವುದು. ವಿವಿಧ ವೇಷಗಳನ್ನು ಧರಿಸಿ (ಪೋಟೇಸು) ಅಭಿನಯಿಸುತ್ತಿದ್ದ ಸ್ಥಳಿಯ ಪ್ರತಿಭೆಗಳ ಪ್ರದರ್ಶನ ನಡೆಯುತ್ತಿತ್ತು.

ಗ್ರಾಮದ ವಯಸ್ಕನಾದ ಪೂವಣ್ಣನ ಮಗ ನಂಜೇಗೌಡ ರೈತವೇಷದಾರಿಯಾಗಿ ನೇಗಿಲಿನೊಂದಿಗೆ ಬಂದು ಹೊಲ ಉಳುವ ಕೆಲಸಕ್ಕೆ ತೊಡಗಿರಲು, ಪೂಜಾರಿಯವರ ನಾಗರಾಜ ಅಲಿಯಾಸ್ ಇಟ್ಟಪ್ಪ ಅವನ ಹೆಂಡತಿಯ ಪಾತ್ರಧಾರಿಯಾಗಿ ಬುತ್ತಿ ತರುವಳು. ಆಗ ಗಂಡನಾದವನು ಏನೇ ಹೊತ್ತು ಮೂರು ಬಾರು ಮುಂದಕ್ಹೋಗದೆ ಈವಾಗಾ ನೀನು ಇಟ್ಟು ತರೋದು, ಇಷ್ಟೊತ್ತು ಯಾವೋನತ್ರಕ ಹೋಗಿದ್ದೆ ಅನ್ನುತ್ತಿದ್ದಂತೆ.. ಸಭಿಕರೆಲ್ಲಾ ಗೊಳ್ ಎಂದು ನಗುವರು. ಅದರಲ್ಲಿ ವಿವಾಹಿತ ಮಹಿಳೆಯರು ಸೆರಗಿನ ಮರೆಯಲ್ಲಿ ನಗುತಿದ್ದರೆ, ಪ್ರಾಯದ ಹೆಣ್ಣುಗಳು ತಮ್ಮ ಆಂಗಿಕಭಾಷೆಯಲ್ಲಿ ನಕ್ಕು ಮುಖ ಕೆಂಪಾಗಿಸಿಕೊಳ್ಳುತ್ತಿದ್ದರು. ನಂತರ ಗಂಡನಿಗೆ ಪ್ರತಿಕ್ರಿಯಿಸುತ್ತಾ ಹೆಣ್ಣಾದವಳು ಹೀಗನ್ನುತ್ತಿದ್ದಳು, ಅಯ್ಯೋ! ಮಾಮಾ.. ನಾನು ಸರಿಯೊತ್ತಿಗೇನೇ ಮನೆ ಬಿಟ್ಟು ಬುತ್ತಿ ತಕ್ಕಂಡು ಬಂದೆ, ಬರಬೇಕಾದರೆ ನಮ್ಮ ಕೆಳಗಿನ ಹೊಲದ ಪಕ್ಕದಲ್ಲಿದ್ದ ಹೊಂಗೆ ಮರದ ಕೆಳಗೆ ದ್ಯಾವಣ್ಣ ಮಗನು ನಾರಾಣಶಾಮಿ (ಚಿಕ್ಕ ಗುಳ್ಳಪ್ಪ ಆತನ ಅಡ್ಡ ನಾಮ)ಕುರಿಗಳು ಬಿಟ್ಟುಕಂಡು ಕುಂತಿದ್ದ, ಏನಮ್ಮಯ್ಯಾ ಸುಡೋ ಬಿಸುಲಾಗ ಒಬ್ಬೇ ಹೋಗ್ತಿದ್ದೀಯಾ ಬಾ ರವಸ್ಟೊತ್ತು ಕುಂತು ಎಲೆ–ಅಡಿಕೆ ಹಾಕ್ಕೊಂಡು ಹೋಗೀಯಾ ಅಂತ ಕೂಗಿದ್ನು ಅದಕ್ಕೆ ಅಲ್ಲಿಗೋದೆ. ಆ ಮುಂಡೇಮಗನ ಕಣ್ಣುಗಳು ಎಲ್ಲೆಲ್ಲೋ ಹರೀತಿದ್ವು ಆಮೇಲೆ ಏನಂದ ಗೊತ್ತಾ.. ಅವನೇನು ಉಳೋದು ನಾನೂ ಒಂದುಸಾರಿ ಉಳಲೇನು ನಿನ್ನ ಹೊಲವಾ ಅಂದ! ಅಯ್ಯೋ.. ನಿನ್ನ ಬಾಯಾಗ ಬಂತಕತ್ತಾಳಿ (ಮುಳ್ಳಿಂದ ಕೂಡಿದ ಕತ್ತಾಳೆ ಜಾತಿಯ ಗಿಡ) ತುರ್ಕಾ! ಎತ್ತನ ಗ್ರಹಚಾರ ಅಂಥ ಅಲ್ಲಿಂದ ಕಾಲುಕಿತ್ತೆ ಅನ್ನುತಿದ್ದಂತೆ.. ಜನ ಮತ್ತು ಜನಮಂದೆಯಲ್ಲಿ ಕುಂತು ಆಟ ನೋಡುತಿದ್ದ ನಾರಾಯಣಸ್ವಾಮಿ ಬಾಯಲ್ಲಿನ

ತಾಂಬೂಲದ ತುಮ್ಮಲೆಲ್ಲಾ ಮುಂದಿನವರ ಮೇಲೆ ಬೀಳೋ ರೀತಿ ಬಾಯ್ ತುಂಬಾ ನಕ್ಕು ಅಯ್ಯೋ ಸುಪ್ಪನಾತಿ ನಾನೇ ಸಿಕ್ಕಿದ್ನಾ ನಿನಗೆ.. ಅಂಥ ಬೈಕೊಂಡು ಕೂರೋನು. ಆವಾಗ ಗಂಡನಾದೋನು ಅಲ್ವೇ ಅವನು ಕುರಿಗಳು ಬಿಟ್ಟಕಂಡಲ್ಲಾ ಮೂರೂ ಬಿಟ್ಟು ಕುಂತವನೆ. ಅವನು ಕೂಗ್ತಾನೆ ಎಲೆ–ಅಡಿಕೆ ಕೊಟ್ಟು ಅವನ ಬಾಯಿ ಕೆಂಪಗೆ ಮಾಡೋಕೋಗಿದ್ದೀಯಲ್ಲಾ, ಯಾಮಾರಿದ್ರೆ ನಿನಗೂ ಕೆಂಪಗಾಗ್ತಿತ್ತು ಅಂತಿದ್ದಂಗೆ ಪಡ್ಡೆ ಹುಡುಗ್ರು ಏನು? ಅನ್ನೋರು! ಜನಕ್ಕೆಲ್ಲಾ ನಗೆಸಾಗರದಲ್ಲಿ ಜಲಕವಾಡಿದ ಪುಳಕವಾಗುತ್ತಿತ್ತು.

ಹೀಗೆ ಎರಡರ್ಥಗಳು ತುಂಬಿದ ಸಂಭಾಷಣೆಯು ಹಾಸುಹೊಕ್ಕಾಗಿದ್ದು ಇದಕ್ಕೆ ಯಾವುದೇ ಸೆನ್ಸಾರ್ ಬೋರ್ಡ್‌ನ ಪ್ರಮಾಣಪತ್ರ ಬೇಕಿರಲಿಲ್ಲ. ಆದಕಾರಣ ಪ್ರೇಕ್ಷಕರು ತಮ್ಮ ಆಯಾಸವೆಲ್ಲಾ ಒಮ್ಮೆಲೆ ಕಿತ್ತು ಹೊರ ಬರುವ ರೀತಿ ನಕ್ಕು ಮೈ–ಮನಸ್ಸು ಹಗುರ ಮಾಡಿಕೊಳ್ಳುತಿದ್ದರು.ಇನ್ನುಳಿದವರು ಆ ಸಂಭಾಷಣೆಯನ್ನು ನಿಜ ಮಾಡುವತ್ತ ತಮ್ಮ ಚಿತ್ತ ಹರಿಸಿ ಪಾತ್ರದಾರಿಗಳ ಹುಡುಕಾಡದಲ್ಲಿ ಮಗ್ನರಾಗಿರುತ್ತಿದ್ದರು.

ಇದಾದ ನಂತರ ನನ್ನ ಮಾವ ಕೃಷ್ಣಪ್ಪ (ಎಸ್.ಎಂ. ಕೃಷ್ಣ ಅಡ್ಡನಾಮ) ಸೀರೆಯುಟ್ಟು ಕರಗದ ವೇಷದಾರಿಯಾಗಿ ಕುಣಿತ ಮಾಡೋನು ನಾನು ವೀರಕುಮಾರನಂತೆ ಕರಗದ ಮುಂದೆ ಕುಣಿಯುತ್ತಿದ್ದೆನು.

ಅದಾದ ನಂತರ ಆಂಜಿನಪ್ಪನವರ ನಂಜೇಗೌಡ ಹಸಿರು ಬಣ್ಣದ, ಥೇಟ್ ಹನುಮಂತನ ವೇಷದ ರೆಡಿಮೇಡ್ ವಸ್ತ್ರವನ್ನು ಧರಿಸಿ ವಿನಮ್ರವಾಗಿ ಕುಣಿದು ಜನರನ್ನು ರಂಜಿಸುತ್ತಿದ್ದನು.

ಆ ನಂತರ ಮನಿಯಪ್ಪನವರ ಗಂಟು ಮನಿಯಪ್ಪ ಕರಿಕೋಟು, ಕಚ್ಚೆ–ಪಂಚೆ ಧರಿಸಿ, ಕೊಡೆ ಹಿಡಿದು ಧಿಮಾಕಿನ ಮನುಷ್ಯನಂತೆ ಬಂದು ಸಂತೆಯಲ್ಲಿ ಕುರಿ ವ್ಯಾಪಾರ ಮಾಡುವ ಪ್ರಸಂಗವಂತೂ ಮತ್ತಷ್ಟು ಹಾಸ್ಯಭಾರಿತವಾಗಿರುತ್ತಿತ್ತು. ಹೌದು! ಕುರಿಯನ್ನು ಕೊಳ್ಳಬೇಕಾದರೆ ಅದರ ದೇಹದ ತೂಕ, ಸೊಂಟದ ಮೇಲೆ ಕೈಹಾಕಿ ಅದರ ಚರ್ಬಿ ಪರೀಕ್ಷೆ ಮಾಡಬೇಕಾಗುತ್ತಿತ್ತು, ಅಲ್ಲದೆ ಗಂಡು–ಹೆಣ್ಣು ಲಿಂಗದ ಪರೀಕ್ಷೆಗಿಳಿದಾಗ ನಾಲ್ಕು ಕಾಲಿನಲ್ಲಿ ನಡೆಯುವ ಕುರಿಯಂತೆ ಹುಡುಗನೊಬ್ಬ ನಟಿಸಿದಾಗ ತಾನು ಅವನ ಕಾಲುಗಳ ಮಧ್ಯೆ ಕೈಹಾಕಲು ಹೋದಾಗ ಬ್ಯಾ.. ಎಂಬ ಶಬ್ಧ ನೆರೆದವರಿಂದ ಬರುತ್ತಿತ್ತು. ಮುಂದುವರೆದು ಕೈ ಹಾಕಿದಾಗ ಅದರ ವೃಷಣಗಳನ್ನು ಪರೀಕ್ಷಿಸುವಂತೆ ನಟಿಸಿ ಇದಕ್ಕೆ ಒಂಟಿ ಬೀಜ ಎಂದು ಹೇಳಿದಾಗ ನೀರೆಯರು ನಾಚಿ ನೀರಾಗುತ್ತಿದ್ದರು. ಹೌದು ದೇವರಿಗೆ ಹರಕೆ ತೀರಿಸಬೇಕಂದ್ರೆ ಬಲಿಪಶುವಿಗೆ ಯಾವುದೇ ನ್ಯೂನ್ಯತೆಗಳು ಇರಬಾರದು ಎನ್ನುವ ನಂಬಿಕೆಯಿದೆ ನಮ್ಮ ಜನಪದರಲ್ಲಿ, ಅದಕ್ಕೆ ಬೇರೆಯದರ ಹುಡುಕಾಟದಲ್ಲಿದ್ದಾಗ ಇನ್ನು ಕೆಲವು ಟಗರುಗಳ ಬೀಜಗಳ ಗಾತ್ರವನ್ನು ನೋಡಿ, ಇದೇನೋ ಇವು ನಮ್ಮ ಮ್ಯಾಕಲಪ್ಪನವರ ರಾಮಣ್ಣನ ಬೀಜಗಳು ಇದ್ದಂಗವೇ.. ಅಂತಿದ್ದಂಗೆ ಸೇರಿದ್ದವರಿಗೆ ನಗು ತಡೆಯಕ್ಕಾಗುತ್ತಿರಲಿಲ್ಲ. ಆವಾಗ ಅಲ್ಲೇ ಇದ್ದ ನಿಜರೂಪಧಾರಿ ಮುನಿಯಪ್ಪನಂತೂ ಥೂ.. ನಿಮ್ಮ ಬಾಯಿ ಬಿದ್ಹೋಗಾ, ನನ್ನ ಬೀಜಳೇ ಬೇಕಾಗಿದ್ವಾ ನಿಮ್ಕ ಹಲ್ಕಾ ನನ್ನಮಕ್ಕಳೇ, ಕೆರದಾಗ ಹಾಕ್ತೀನಿ ಅಂಥ ನಖಶಿಖಾಂತ ಬೈಕಂಡು ಶಾಪ ಹಾಕಿ ಆಮೇಲೆ ಸುಮ್ಮನಾಗೋನು. ಈ ಪ್ರದರ್ಶಗಳಲ್ಲಂತೂ ಹಾಸ್ಯ ಮತ್ತು ಅಶ್ಲೀಲವೇ ತನ್ನ ಮೇರೆಯನ್ನು ಮೀರಿ ಗೆಲ್ಲುತ್ತಿತ್ತು ಎಂದರೆ ತಪ್ಪಾಗಲಾರದು.

ಇಷ್ಟೆಲ್ಲಾ ಸಂಭ್ರಮದ ನಂತರದ ಭಾಗ ಕಾಮನ ದಹನ. ಹೌದು! ಈಗ ಹಬ್ಬದ ಅಂತಿಮ ಘಟ್ಟ. ಊರಿನ ಬೀದಿಗಳಲ್ಲಿ ಸಂಚರಿಸುವಾಗಲೇ ನನ್ನ ದೊಡ್ಡಪ್ಪ ಹಿಂಬಾಲಕರ ಸಹಕಾರದೊಂದಿಗೆ ಮನೆಗಳಲ್ಲಿ ಬಳಸಿಬಿಸಾಡುವ ಹಂತದಲ್ಲಿರುವ ನಿರುಪಯುಕ್ತ ವಸ್ತುಗಳಾದ ಕೇರುವ ಮೊರ, ಕಸ ಪೊರಕೆ, ಹೂ ಬುಟ್ಟಿ, ತೊಟ್ಟಿಲು, ಚಾಪೆ,

ಮರದ ಬೀಸಣಿಗೆ, ಬಾಚಣಿಗೆ, ಸೀರಣಿಗೆ, ಮರದ ಗೂಡೆ, ಪೆಟ್ಟಿಗೆ, ಮನೆಯ ಕಿಟಕಿಗಳು, ಬಂಡಿಯ ಚಕ್ರಗಳು ಇತ್ಯಾದಿ ಜನಪದೀಯ ಪರಿಕರಗಳನ್ನು ಆರಿಸಿ ತಂದು ಆ ಸಂಜೆಯೇ ಚಾವಡಿಯ ಪಕ್ಕದಲ್ಲಿ ರಾಶಿಹಾಕುತ್ತಿದ್ದರು ಆ ರಾಶಿಯನ್ನು ಚಟ್ಟದಂತೆ ಪೇರಿಸಿಟ್ಟು ಅದರ ಪಕ್ಕದಲ್ಲಿ ಏಣಿ(ನಿಚ್ಚಣಿಕೆ)ಯನ್ನಿಟ್ಟು ಅದರ ಮೇಲೊಂದು ಬಿಳಿಯ ಪಂಚೆಯನ್ನು ಹಾಸಿ ಹಾಡಿಯನ್ನು ಅಣಿಗೊಳಿಸುತ್ತಿದ್ದರು. ಈಗ ಈ ಆಣಿಯ ಮೇಲೆ ಮಲಗಿ ಕಾಮನ ಪಾತ್ರಮಾಡುವವನು ಬಹುಮುಖ್ಯ ಹಾಗೂ ಧೈರ್ಯಶಾಲಿಯೇ ಆಗಬೇಕಿತ್ತು ನಾವೆಲ್ಲಾ ಈ ಆಟದಿಂದ ಹಿಂದೆ ಸರಿಯುತ್ತಿದ್ದೆವು, ನಮ್ಮಂತೆಯೇ ನಮಗಿಂತ ಹಿರಿಯರೂ ಕೂಡಾ.. ಆದರೆ ಹಾಲುಬಂಡಿ ಮನಿಯಪ್ಪನ ಮಗ ನಾಗನು ಮಾತ್ರ ಈ ಕಾರ್ಯಕ್ಕೆ ಕಂಕಣಬದ್ಧನಾಗಿ ಮುಂದೆ ಬರುತ್ತಿದ್ದನು. ಬಂದವನೇ ಅದರ ಮೇಲೆ ಮಲಗಿ ಪಂಚೆಯಿಂದ ಆವೃತವಾಗಿ ಅಚ್ಚ ಶವದಂತೆ ಭಾಸವಾಗುತ್ತಿದ್ದನು ಜೊತೆಗೆ ಜೀವಂತವಾಗಿಯೂ ಹಾಗೆಯೇ ಗೋಚರಿಸುತ್ತಿದ್ದನು. ನನ್ನ ದೊಡ್ಡಪ್ಪನ ತಮಟೆ ಸದ್ದಾಗುವುದು ದೊಡ್ಡಪ್ಪಿ ಫೈನಲ್ ಪೂಜೆ ನೆರವೇರಿಸಿ ತನ್ನದೇ ಕೈಕುಂಚದಿಂದ ಬಿಳಿ ಹಾಳೆಯ ಮೇಲೆ ಬಿಡಿಸಿಟ್ಟುಕೊಂಡಿರುತ್ತಿದ್ದ ಕಾಮನ ಚಿತ್ರವನ್ನು ಚಿತೆಯ ಮೇಲಿರಿಸುವನು, ಆಗ ನೆರೆದವರಲ್ಲಿ ಕೆಲವರು ಕಾಮನ ಕಳೇಬರಕ್ಕೆ ಹೆಗಲಾಗುವರು. ದೊಡ್ಡಪ್ಪಿ ಚಿತೆಗೆ ಅಗ್ನಿಸ್ಪರ್ಶಮಾಡಿದೊಡನೆ ಎಲ್ಲರಲ್ಲೂ ಮೌನ ಮನೆಮಾಡುವುದು, ಚಿತೆಯ ಸುತ್ತಲೂ ಮೂರು ಬಾರಿ ಪ್ರದಕ್ಷಿಣೆ ಹಾಕಿ ಏಣಿಯನ್ನು ಕೆಳಗಿಡುವರು ನಾಗನು ಚಟ್ಟದಿಂದಿಳಿದು ಆ ಕತ್ತಲಲ್ಲಿ ಮರೆಯಾಗುವನು.

ಆ ನಂತರ ದೊಡ್ಡಪ್ಪಿ ಜೋರಾಗಿ

ಕಾಮಣ್ಣ ಮಕ್ಕಳು
ಕಳ್ಳ ಸೂಳೆ ಮಕ್ಕಳು
ಅಡಿಕೆ ಗೋಟು
ಮಡಿಕೆ ತೂತು
ಕಾಮಣ್ಣು ಸತ್ತೋದ್ನಂತಪ್ಪೋ...

ಎಂದೊಡನೆ ನೆರೆದಿದ್ದವರಲ್ಲಿ ಒಂದು ಗುಂಪು ಲೊಬೋ ಲೊಬೋ.. ಎಂದು ಬಾಯಿ ಬಡಿದುಕೊಂಡು ಚೀರಾಡುವರು ಅಲ್ಲಿಗೆ ಕಾಮಣ್ಣನ ಕತೆ ಮುಗಿಯುವುದು. ಇದಾದ ನಂತರ ಎಲ್ಲರೂ ಮನೆಗೆ ತೆರಳುವರು ದೊಡ್ಡಪ್ಪಿ, ನನ್ನ ದೊಡ್ಡಪ್ಪ, ಚಿಕ್ಕನಾಗಪ್ಪ ಹಾಗೂ ಗ್ರಾಮದ ಪ್ರಮುಖರು ಒಂದೆಡೆ ಕುಳಿತು ಎಲೆ–ಅಡಿಕೆ ಜಗಿದು, ಚಾವಡಿಗೆ ಬೀಗ ಜಡಿದು ಮನೆ ಸೇರುವರು. ಹೀಗೆ ತಲೆಮಾರುಗಳಿಂದ ನಡೆದು ಬಂದ ಈ ಪದ್ಧತಿಗಳು ಮಾಧ್ಯಮಗಳ ಭರಾಟೆಯಲ್ಲಿ ಇಂದು ಜಾಳಾಗುತ್ತಿರುವುದು ಕಾಲದ ಚೋದ್ಯವಾಗಿದೆ. ಆದರೂ ನಮ್ಮ ಬಾಲ್ಯ ಹಾಗೂ ಬದುಕಿನ ಬಂಡಿಗೆ ಕಡೆಗೀಲುಗಳಾದ ನಮ್ಮ ಜನಪದ ಪೂರ್ವಸೂರಿಗಳ ಪಾದಕೆ ಶರಣೆಂಬೆನು..

**ಪರಾಮರ್ಶನ ಗ್ರಂಥಗಳು**

1.ಸುವರ್ಣ ಜಾನಪದ ಲೇಖನಗಳು– ಡಾ. ವೀರಣ್ಣ ದಂಡೆ, ಡಾ. ಶ್ರೀಪಾದ ಶೆಟ್ಟಿ. ಪ್ರಕಾಶನ –ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

2. ಕಾಮನ ಹುಣ್ಣಿಮೆ (ಕಾದಂಬರಿ)– ಡಾ. ನಟರಾಜ ಹುಳಿಯಾರ್, ಪ್ರಕಾಶನ– ಪಲ್ಲವ ಪ್ರಕಾಶನ, ಬಳ್ಳಾರಿ.

3. ವಕ್ತೃ: ಮುನಿಬ್ಯಾಟಪ್ಪ, 81 ವರ್ಷ, ಹೊಲೆಯ (ತೋಟಿ), ಕಾಕಚೊಕ್ಕಂಡಹಳ್ಳಿ. ಶಿಡ್ಲಘಟ್ಟ ತಾಲ್ಲೂಕು.

4. ವಕ್ತೃ: ನಾರಾಯಣಸ್ವಾಮಿ, 66 ವರ್ಷ, ಒಕ್ಕಲಿಗ, ಕಾಮನ ಪೂಜಾರಿ, ಕಾಕಚೊಕ್ಕಂಡಹಳ್ಳಿ. ಶಿಡ್ಲಘಟ್ಟ ತಾಲ್ಲೂಕು.